International Journal of Kannada Research 2018; 4(3): 90-92

International Journal of Kannada Research
www.kannadajournal.com

ISSN: 2454–5813
IJKR 2018; 4(3): 90-92
© 2018 IJKR
www.kannadajournal.com
Received: 18-05-2018
Accepted: 19-06-2018

**ಪೀರಪ್ಪಾ ಬಿ.ಸಜ್ಜನ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಕ

**Correspondence**
**ಪೀರಪ್ಪಾ ಬಿ.ಸಜ್ಜನ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಕ

# ಬುದ್ಧ ಬುದ್ಧತ್ವ ಅನುವುದು ಅಂತರಂಗದ ನಿಕ್ಷೇಪ

**ಪೀರಪ್ಪಾ ಬಿ.ಸಜ್ಜನ**

ಮನುಷ್ಯನ ಜೀವನವಿಂದು ಒತ್ತಡದ ಬದುಕಾಗಿದೆ. ಮನಸ್ಸು ಸುಸ್ಥಿತಿಯಲ್ಲಿ ನಿಲ್ಲದಂತಾಗಿದೆ. ಕಾರಣ ಹಲವಾರು ಇವೆ. ಆಸೆಯೂ ಇದೆಲ್ಲದಕ್ಕೂ ಒಂದು ಪ್ರಮುಖ ಕಾರಣವಾದಗಿದ್ದು, ಆಸೆಯೆ ದುಃಖಕ್ಕೆ ಮೂಲ ಕಾರಣವೆಂಬುದಾಗಿ ಭಗವಾನ ಬುದ್ಧರು ಹೇಳಿ ಅಮರರಾಗಿದ್ದಾರೆ. ಬುದ್ಧ, ಮಾಹಾವೀರ, ಯೇಸು, ಬಸವ, ಪೈಗಂಬರರು ನಮ್ಮಂತೆಯೇ ಮಾನವರೇ; ಆದರವರು ಮಹಾತ್ಮರು, ಮಾಹಾಮಾನವರಾದುದು ಹೇಗೆ ಎಂಬುದಾಗಿ ಅವರವರ ಚರಿತ್ರೆಗಳನ್ನೊದಿಕೊಂಡು ಸಾರ್ಥಕವಾಗುತ್ತದೆಂಬುದು ನನ್ನ ಭಾವನೆ, ಸಿದ್ಧಾರ್ಥ ಗೌತಮ ಬುದ್ಧನಾದ ಬಗೆ, ಮಹಾವೀರ ವರ್ಧಮಾನನಾದ ರೀತಿ, ಬಸವ ಜಗಜ್ಯೋತಿಯಾದ ಕ್ರಮ, ಡಾ ಬಾಬಾ ಸಾಹೇಬ ಅಂಬೇಡ್ಕರ್ ದೇಶದ ಮಾಹಾನ ವ್ಯಕ್ತಿ ಆದ ಬಗೆಗಳನ್ನು ಅರಿತುಕೊಳ್ಳಲು ಅವರ ಚರಿತ್ರೆಯ ಗ್ರಂಥಗಳು ನಮಗಿಂದು ಸರಳ ಭಾಷೆ ಕನ್ನಡದಲ್ಲಿ ಲಭ್ಯ ಇವೆ. ಬುದ್ಧನು ಸಾರಿದ ತ್ರಿಪಿಟಕ ಮತ್ತು ಅಷ್ಟಾಂಗಮಾರ್ಗ ಇವುನಮಗಿಂದು ದಾರಿದೀಪಗಳಾಗಿವೆ. ಹಲವಾರು ರೀತಿಯಿಂದ ಈ ದೇಶದಲ್ಲಿ ಜಾತಿವಾದ ಇರುವುದರಿಂದ ಬುದ್ಧನನ್ನು ಆತನ ಧರ್ಮವನ್ನು ಬೆಳೆಸಲಿಲ್ಲ, ಆದರೆ 1956 ರಿಂದ ಇಲ್ಲಿವರೆಗೆ ಡಾ ಬಾಬಾ ಸಾಹೇಬ ಅಂಬೇಡ್ಕರ್ ಅವರಿಂದ ಬೌದ್ಧ ಧರ್ಮ ಮತ್ತೆ ಭಾರತದಲ್ಲಿ ಮರಳಿ ಹುಟ್ಟಿ ಬಂದಿದೆ ಎಂದು ಹೇಳಬಹುದು. ಯಾಕೆಂದರೆ ಈ ದೇಶದ ಪರಿಸ್ಥಿತಿಗನುಗುಣವಾಗಿ ಬಾಬಾ ಸಾಹೇಬರು ಬೌದ್ಧ ಧರ್ಮ ಸ್ವೀಕಾರಮಾಡಿದರು.

ಬುದ್ಧ ಧರ್ಮ ಮತ್ತು ಡಾ. ಅಂಬೇಡ್ಕರ್ ಅವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವರು ನನ್ನ ಜನಗಳು ಅಲ್ಲ ಸವರ್ಣೀಯರು ಮತ್ತು ಬ್ರಾಹ್ಮಣರು ಎಂದು ತಿಳಿದುಕೊಳಬೇಕು. ಅಂತೆಯೇ ಬುದ್ಧ ಹಾಗೂ ಡಾ. ಅಂಬೇಡ್ಕರ್ ಅವರಿಗೆ ಹೊರಗಿನವರೇ ಹೆಚ್ಚು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ ಹೊರತು ನಮ್ಮ ಜನ ಅಲ್ಲ, ಇದರ ಅರ್ಥ ವಿದೇಶದವರೇ ಬುದ್ಧ ಹಾಗೂ ಡಾ ಅಂಬೇಡ್ಕರ್ ಅವರನ್ನು ಹೆಚ್ಚು ತಿಳಿದುಕೊಂಡಿದ್ದಾರೆ.

ನಮ್ಮ ಬದುಕಿನಲ್ಲಿ ನಡೆಯುವ ಒಳಿತು–ಕೆಡಕು, ಸರಿ–ತಪ್ಪು, ಹಿತ–ಅಹಿತ, ಸುಖ–ದುಃಖ, ನೋವು–ನಲಿವು, ಮಾನ,ಅಪಮಾನ, ಪಾಪ–ಪುಣ್ಯ, ಸ್ವರ್ಗ–ನರಕ–ಒಟ್ಟಾರೆ ನಮ್ಮ ಸಂಪೂರ್ಣ ಅಸ್ತಿತ್ವವನ್ನು ಹಾಗೂ ಇರುವಿಕೆಯನ್ನೆ ದೇವರಿಗೆ ಅರ್ಪಿಸಿದರೆ ನಮ್ಮ ಬದುಕಿನಲ್ಲಿ ಅಗಾಧವಾದ ಪರಿವರ್ತನೆಯಾಗಲು ಸಾಧ್ಯ. ಇದುವೇ ಜೀವನದ ದಿವ್ಯ ರಾಜಮಾರ್ಗ ಇದೆಲ್ಲದರ ಅರಿಕೆಯುಳ್ಳ ಮಾನವ ಅನ್ಯ ಮಾರ್ಗವಿಡಿದು ನಡೆದರೇನು ಪ್ರಯೋಜನ? ದಲಿತರು ಮತ್ತು ದಲಿತರು ಪಾತ್ರ ಯಾವ ರೀತಿಯಿದೆ ಅಂದರೆ ಬುದ್ಧನಿಂದ ಬಂದ ದಲಿತರ ಸ್ಥಿತಿಗತಿ ನಾನು ಹೇಳುವುದು ನಿಜವಾದ ಮಾತು. ಯಾಕೆಂದರೆ ನಾನು ಬಹಳ ಅಕ್ರೋಶದಿಂದ ಹೇಳುತಿರಬಹುದು, ಇದರ ಹಿಂದೆ ಬಹಳಷ್ಟು ಕಾರಣಗಳಿವೆ. ಯಾಕೆಂದರೆ ದಲಿತರು ಮಾಡುವ ಕಾರ್ಯಕ್ಕೆ ಅಂಬೇಡ್ಕರವಾದಿ, ಬುದ್ಧಿವಾದಿಗಳಿಗೆ ಸಹಿಸಕೊಳ್ಳುವುದಕ್ಕೆ ಆಗುವುದಿಲ್ಲ. ಬುದ್ಧ ಇಡಿ ಭಾರತಕ್ಕೆ ಹಾಗೂ ಜಗತ್ತಿಗೆ ಬೆಳಕು ಕೊಟ್ಟವರು, ಆದರೂ ಜನರಲ್ಲಿ ಮೂಢನಂಬಿಕೆ, ಕಂದಾಚಾರ ಬಿಡಲಿಲ್ಲ. ಎಂಥ ದುರಂತ, ಕಲ್ಲಿಗೆ ದೇವರು ಎನ್ನುತ್ತಲೇ ಇದ್ದಾರೆ.

ಹೀಗೆ ಮುಂದೆ ಬಾಬಾಸಾಹೇಬರು ಇಡೀ ಭಾರತ ದೇಶಕ್ಕೆ ಅರಿವು ಮೂಡಿಸಿದರೂ ಕೂಡಾ ಜನರಿಗೆ ಮನವರಿಕೆ ಆಗ್ತಾಯಿಲ್ಲಾ. ದೇಶಕ್ಕೆ ಅಪಾರವಾದ ಕೊಡುಗೆ ಕೊಟ್ಟಿದ್ದಾರೆ. ನಮ್ಮ ದೇಶದ ಜನರು ಅವರಿಗೆ ಏನು ಕೊಡುಗೆ ಕೊಟ್ಟಿದ್ದಾರೆ ಎನ್ನುವುದು ಮುಖ್ಯ. ಬಾಬಾಸಾಹೇಬರಿಗೆ ನನ್ನ ಜನ ಅರ್ಥ ಮಾಡಿಕೊಂಡಿಲ್ಲ ಬೇರೆಯವರೆ ಅರ್ಥಮಾಡಿಕೊಂಡಿದ್ದಾರೆ. ಡಾ. ಬಾಬಾಸಾಹೇಬರು ಈ ದೇಶಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅದು ನಮ್ಮಿಂದ ಹೇಳೊಕ್ಕೆ ಆಗಲ್ಲ.

ಬುದ್ಧ ಧರ್ಮಕೋ ಅಪನಾ ಕೆಹೆತೆ
ಭೂಲಗಯ ಎ ಅಭಿಮಾನ

ಹೀಗೆ ನಮ್ಮ ದೇಶದಲ್ಲಿ ಜನರ ಪರಿಸ್ಥಿತಿ ಆಗಿಬಿಟ್ಟಿದೆ. ಯಾಕೆಂದರೆ ಅಂಬೇಡ್ಕರ ಅವರು ಬೌದ್ಧ ಧರ್ಮ ಸ್ವೀಕಾರ ಮಾಡಿದರೆ ಎಂದು ನಾವು ಕೂಡಾ ಬೌದ್ಧ ಎಂದು ಹೇಳಿಕೊಂಡು ಆಮೇಲೆ ಮರೆತು ಬಿಡುವುದು ಇಂದು ಸಹಜ ಎಂಬಂತಾಗಿದೆ.

ಭಾರತ ದೇಶದಲ್ಲಿ ಡಾ. ಅಂಬೇಡ್ಕರ್ ಅವರು ಹುಟ್ಟುವುದಕ್ಕಿಂತ ಮುಂಚೆ ದಲಿತರ ಪರಿಸ್ಥಿತಿ ಹೇಗಿತ್ತು ಇವಾಗ ಹೇಗ ಎಂದು ಅರ್ಥಹಿಸಿಕೊಳ್ಳಬೇಕಾಗಿದೆ ಬಂದುಗಳೇ. ಇವಾಗ ಡಾ ಬಾಬಾಸಾಹೇಬರು ಎಲ್ಲವನ್ನು ಮಾಡಿಕೊಟ್ಟಿದ್ದಾರೆ ಯಾವುದೇ ಕುಂದುಕೊರತೆ ಇಲ್ಲ ಸಂವಿಧಾನ ಇದಕ್ಕೆಲ್ಲ ಮೂಲ ಎನ್ನಬಹುದು.

ದಲಿತರು ಸ್ವಲ್ಪ ಶ್ರೀಮಂತರಾದ ಮೇಲೆ ಡಾ ಬಾಬಾಸಾಹೇಬರನ್ನೇ ಮರೆತು ಬಿಡುತ್ತಾರೆ ಉದಾ. ಗಣೇಶ ಚತುರ್ಥಿ ಮಾಡುವುದು ಅಂಭಾ ಭವಾನಿಗೆ ಹರಕೆ ಮಾಡುವುದು. ಹೀಗೆ ಅನೇಕ ಜನ ಮಾಡುತ್ತಾರೆ. ಇದು ಬಾಬಾ ಸಾಹೇಬರಿಗೆ ದಲಿತರು ಮಾಡುತ್ತಿರುವ ದ್ರೋಹ ಎನ್ನಬಹದು.

ಡಾ. ಬಾಬಾಸಾಹೇಬರು ಮಾಡಿದ ಒಂದು ಅಮೂಲ್ಯವಾದ, ಮಹತ್ವವಾದ ಕೆಲಸ ಅಂದರೆ ಬೌದ್ಧ ಧರ್ಮ ಸ್ವೀಕಾರ ಮಾಡಿದ್ದು, ಬಹಳಷ್ಟು ಒಳ್ಳೆಯಕೆಲಸ ಎನ್ನಬಹುದು. ಯಾಕೆಂದರೆ ಹಿಂದುಗಳು ದೇವಸ್ಥಾನಕ್ಕೆ ಗುಡಿ ಗುಂಡಾರಕ್ಕೆ ಹೋಗುತ್ತಾರೆ. ಆದರೆ ದಲಿತರು ಬೌದ್ಧ ಮಂದಿರಕ್ಕೆ ಬರುತ್ತಾರೆ. ಇದು ಒಂದು ಭಾರತ ದೇಶಕ್ಕೆ ದೊಡ್ಡ ಕೊಡುಗೆ ಆಗಿದೆ. ಯಾಕೆಂದರೆ ಎಲ್ಲಾ ಜಾತಿಯವರು ಬೌದ್ಧ ವಿಹಾರಗಳಿಗೆ ಭೇಟಿ ನೀಡುತ್ತಾರೆ. ವಿಶೇಷ ಅಂದರೆ ಮುಸ್ಲಿಂ ಜನ ಎಲ್ಲಿ ಯಾವ ದೇವಾಲಯಕ್ಕೆ ಭೇಟಿ ನೀಡುವುದಿಲ್ಲ. ಆದರೆ ಬೌದ್ಧ ಮಂದಿರಕ್ಕೆ ಭೇಟಿ ನೀಡುತ್ತಾರೆ ಎಂದು ಬಾಬಾಸಾಹೇಬರು ಮಾಡಿದ ದೊಡ್ಡ ಕೊಡುಗೆ ಎನ್ನಬಹುದು.

"ವಯಸ್ಸು ಆಲೋಚಿಸುತ್ತದೆ-ಯೌವನ ಸಾಹಸಿಗನನ್ನಾಗಿಸುತ್ತದೆ" ಎಂಬ ಗಾದೆಯಂತೆ ಮುಪ್ಪಾವಸ್ಥೆ ಬರುವದರ ಮನ್ನವೆ ಇಂತಹ ಸಾಧನೆಯನ್ನು ಮಾಡಬೇಕಾದುಉದು ಪ್ರತಿಯೊಬ್ಬನ ಕರ್ಮವಾಗಬೇಕು. ಯಾವುದಕ್ಕೂ, ಯಾವ ಕಾರ್ಯಕ್ಕೂ ನಾಳೆ ಮಾಡಿದರಾಯಿತೆನ್ನಬಾರದು. ಕಾಯ-ವಾಚಾ-ಮನಸಾ ತ್ರಿಕರಣಪೂರ್ವಕವಾಗಿ ಸತ್ಕಾರ್ಯಗಳಲ್ಲಿಯೇ ಭಾಗಿಯಾಬೇಕಾದುದು ಮನುಷ್ಯನ ಕರ್ತವ್ಯವಾಗಬೇಕು. ಎಲ್ಲರಲ್ಲೂ ಬುದ್ಧರಾಗುವ ಅಂಶವಿದೆ. ಈ ದೇಹವೆಂಬ ಆಲಯದಲ್ಲಿ ಆತ್ಮ ಎಂಬ ಪರಮಾತ್ಮ ನೆಲೆಸಿದ್ದಾನೆ. ಆತ್ಮಸಾಕ್ಷಿಯಾಗಿ ನೆನೆಯುತ್ತ ಬದುಕು ಸಾಗಿಸಬೇಕು. ಇದುವೇ ಸನ್ಮಾರ್ಗವಾಗಿದೆ.

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಮಾತಿನಂತೆ ನಾವೆಲ್ಲರೂ ನಡೆಯಬೇಕಾದ ಕಾಲ ಒದಗಿ ಬಂದಿದೆ. ನೀನು ಬದುಕಿ, ಇತರರನ್ನು ಬದುಕಲು ಬಿಡುವುದೇ ಸಂವಿಧಾನದ ಆಶಯ. ಕಷ್ಟಕಾಲದಲ್ಲಿ ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡಲು ಧರ್ಮದ ಹಣೆಪಟ್ಟಿ ಅಡ್ಡಿಯಾಗಬಾರದು.

ಅಂಬೇಡ್ಕರ್ ಅವರು ಮೊದಲಿನಿಂದ ಕಡೆಯವರೆಗೆ ದೇಶಭಕ್ತರಾಗಿದ್ದರು. ಅವರಿಗೆ ಬಾಲ್ಯ, ಯೌವ್ವನ ಮತ್ತು ಇಳಿಗಾಲದಲ್ಲಿ ಆದ ಅನೇಕ ಅವಮಾನಗಳಿಗೆ ಪ್ರತಿಯಾಗಿ ಅವರು ಹಿಮದು ಸಮಾಜವನ್ನು ತಿದ್ದಲು ಯತ್ನಿಸಿದರು, ಸಂಸ್ಕೃತದ ಪರವಾಗಿ ಮಾತನಾಡಿದರು, ಗಾಂಧೀಜಿಯವರ ಅತಿರೇಕದ ನಡವಳಿಕೆ ಮತ್ತು ಕಾಂಗ್ರೆಸ್ ತಾನೇ ಭಾರತದ ಪ್ರತಿನಿಧಿ ಎಂದು ಘೋಜನ್ನು ಕೊಡುತ್ತಿದ್ದನ್ನು ವಿರೋಧಿಸಿದರು. ಅದರಿಂದಲೇ ಕಮ್ಯುನಿಸ್ಟರು, ಜಾತಿವಾದಿಗಳು ಮತ್ತು ಕಾಂಗ್ರೆಸಿಗರ ವೈರ ಕಟ್ಟಿಕೊಂಡರು.

ಆದರೆ ಅವರು ಅನೇಕ ಸಲ ಹೇಳಿದ ಮಾತೆಂದರೆ: "ನಾವು ಮೊಟ್ಟಮೊದಲು ಭಾರತೀಯರು ಮತ್ತು ಕಟ್ಟಕಡೆಗೂ ಭಾರತೀಯರು, ಕಾಲಾನುಕ್ರಮದಲ್ಲಿ ಯೋಗ್ಯ ಸನ್ನಿವೇಶಗಳು ಕೂಡಿಬಮದಾಗ ಈ ದೇಶ ಒಂದು ವಿಶ್ವ ಶಕ್ತಿಯಾಗುವುದನ್ನು ತಡೆಯುವ ದುಸ್ಸಾಹಸ ಜಗತ್ತಿನ ಇನ್ನಾವ ಶಕ್ತಿಗೂ ಇರದು".

ಅವರನ್ನು ಸಾಮಾನ್ಯ ನೋಟಕ್ಕೆ ಅಳೆಯುವುದು ಸಾಧ್ಯವಿರಲಿಲ್ಲ ಆದರೆ ಮೇಲ್ನೋಟಕ್ಕೆ ಅವರನ್ನು ಅರಿಯದವರು ಬ್ರಾಹ್ಮಣ ವಿರೋಧಿ ಎಂದು ಲೇಬಲ್ ಮಾಡಿದರು. ಅರುಣ ಶೌರಿಯಂತವರು ಇನ್ನೂ ಮುಂದೆ ಹೋಗಿ ವರಸಿಫಿಂಗ್ ದಿ ಫಾಲಸ್ ಡಾಡ್ ರಚಿಸಿ ಅವರಿಗೆ ದೇಶದ್ರೋಹದ ಪಟ್ಟವನ್ನು ಕಟ್ಟಿಬಿಟ್ಟರು! ಆದರೆ ಸಂವಿಧಾನವನ್ನು ದೇಶಕ್ಕೆ ಒಪ್ಪಿಸಲು ರಾಜ್ಯಾಂಗ ಸಭೆಯ ಅಂತಿಮ ಸೇರುವಿಕೆಯ ದಿನದಂದು 14–11–1949 ಅವರು ಮಾಡಿದ ಭಾಷಣ ಅವರ ಭಾರತ ದರ್ಶನವೇ ಸರಿ. ಅಂದು ಎಲ್ಲರೂ ಬಾಬಾ ಸಾಹೇಬರ ಭಾಷಣಕ್ಕೆ ಕಾಯುತ್ತಿದ್ದರು. ಸಂವಿಧಾನ ರಚನೆಯ ಸಿಂಹಪಾಲು ಅವರದ್ದೇ ಅಲ್ಲವೇ?

ಬಾಬಾ ಸಾಹೇಬರು ಹೇಳಿರುವ ಮಾತುಗಳು ದೇಶದ ಬಗ್ಗೆ ಕಾಳಜಿ ಮಾಡುವವರ ಪಾಲಿಗೆ ಇಂದಿಗೂ ಪ್ರಸ್ತುತ. ಸಂವಿಧನ ಒಳಗೊಂಡ ತತ್ತ್ವಗಳು ಇಂದಿನ ತಲೆಮಾರಿನ ಆಲೋಚನೆ ಕ್ರಮವನ್ನು ಬಿಂಬಿಸುತ್ತವೆ ಎನ್ನೋಣ. ಮುಂದೆ ಅವರು ವ್ಯಕ್ತಪಡಿಸಿದ ಭಾಗಗಳು ಇಂದಿನ ದಿನಗಳ ಆತಂಕಗಳು ಹೌದು.

"ನಾಡಿನ ಭವಿಷ್ಯವನ್ನು ಕುರಿತು ಚಿಮತಿಸಿದಾಗ ಇಂದು ನನಗೆ ಆತಂಕವೆನಿಸುತ್ತದೆ. ಈ ಮೊದಲು ಭರತ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿತಲ್ಲದೆ ತನ್ನದೇ ಜನಗಳ ದೇಶದ್ರೋಹ ಬುದ್ಧಿಯಿಂದಾಗಿ ಕಳೆದುಕೊಂಡಿತ್ತು ಎನ್ನುವುದೇ. ನನ್ನ ಆತಂಕಕ್ಕೆ ಕಾರಣವಾಗಿದೆ. ಬಾಬಾಸಾಹೇಬರು ಹೇಳುವ ಮುಂದಿನ ಮಾತು ಓದಿದರೆ ಎಲ್ಲ ದೇಶಪ್ರೇಮಿಗಳ ಹೃದಯವೂ ಝಲ್ ಎನ್ನುತ್ತದೆ. "ಚರಿತ್ರೆ ಪುನರಾವರ್ತನೆಯಾದೀತೇ? ಎಂದು ಆತಂಕವೆನಿಸುತ್ತದೆ. ಅದಕ್ಕೆ ಕಾರಣವೆಂದರೆ, ನಮ್ಮ ಪ್ರಾಚೀನ ಶತ್ರುಗಳಾದ ವಿವಿಧ ಜಾತಿ, ಮತ, ಪಂಥಗಳ ಜೊತೆಯಲ್ಲಿ ಹತ್ತಾರು ಬಗೆಯ ಧೋರಣೆಗಳನ್ನಿರಿಸಿಕೊಂಡ ಹತ್ತಾರು ರಾಜಕೀಯ ಪಕ್ಷಗಳು ಸೇರಿಕೊಂಡಿವೆ. ಜನಗಳ ಹಿತಸಾಧನೆಗಿಂತ ಪಕ್ಷಗಳ ಧೋರಣೆ ದೊಡ್ಡದಾಗಕೂಡದೆಂದು ನಾವಿಂದು ಎಚ್ಚರ ವಹಿಸದಿದ್ದರೆ ಮತ್ತೆ, ಬಹುಶ: ಕೊನೆಯದಾಗಿ, ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳುವ ಅಪಾಯಕ್ಕೆ ಗುರಿಯಾಗುತ್ತೇವೆ".

ದೇಶಭಕ್ತರಲ್ಲದವರು ಆಡುವ ಮಾತೇ ಇದು? ಅವರು ಒಂದೊಂದು ಮಾತನಾಡಿ ನಾಲಿಗೆ ಹೊಲಸು ಮಾಡಿಕೊಳ್ಳುತ್ತಿರಲಿಲ್ಲ. ಗಾಂಧೀಜಿಯವರ ಹಿಂದ್ ಸ್ವರಾಜ್ಯ ಗ್ರಾಮಭಾರತ ಅಂಬೇಡ್ಕರರಿಗೆ ಒಪ್ಪಿಗೆ ಇರಲಿಲ್ಲ. ದಲಿತರು ಹಳ್ಳಿಗಳ ಕೊಳಕು ರಾಜಕೀಯ, ಅವಮಾನಗಳಿಂದ ಪಾರಾಗಬೇಕು ಎಂಬುದು ಅವರ ಆಶಯ. ರೈಲು, ಕೈಗಾರಿಕೆಗಳನ್ನು ಅವರು ಸ್ವಾಗತಿಸಿದರು.

ಅಂಬೇಡ್ಕರ ಅವರ ಕೊಡುಗೆಯ ಉಲ್ಲೇಖಗಳು ಈಗ ಹಲವು ಕಡೆ ಪ್ರಕಟವಾಗುತ್ತಿರುವುದು ಸಮಾಜ, ದೇಶ ಅವರ ಪರಿನಿರ್ವಾಣ ಹೊಂದಿದ ಹಲವು ದಶಕಗಳ ನಂತರವಾದರೂ ಅವರ ಕಾಣಿಕೆ, ಕಾಣ್ಕೆಗಳತ್ತ ಮುಖ ಮಾಡಿರುವುದರ ಸೂಚನೆ. ಪಾಂಡಿಚೇರಿ ವಿವಿಯ ತತ್ತ್ವಶಾಸ್ತ್ರ ವಿಭಾಗದ ಅಧ್ಯಕ್ಷ ಪ್ರೊ. ಶ್ರೀನಿವಾಸ ಹಾಗೂ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಕುಲಪತಿ ಪ್ರೊ. ವಿ ಕುಟುಂಬ ಶಾಸ್ತ್ರಿ ರಚಿಸಿರುವ "ಎ ಕನ್ಸೈಸ್ ಡಿಕ್ಷನರಿ ಆಫ್ ಫಿಲಾಸಫಿ," ಕೃತಿ ಅಂಬೇಡ್ಕರ್ ಕೊಡುಗೆಯನ್ನು ಸ್ಮರಿಸಿದೆ.

ಡಾ. ಅಂಬೇಡ್ಕರ ಅವರು ತಮ್ಮ ಜೀವನದಲ್ಲಿ ನಿಮ್ನವರ್ಗಗಳ ಪರವಾದ ಶಿಕ್ಷಣ, ಸಂಘಟನೆ, ಹೋರಾಟಗಳ ಸಲುವಾಗಿ ಅನೇಕ ಪತ್ರಿಕೆಗಳನ್ನು ಆರಂಭಿಸಿದರು. ಅದರ ವ್ಯಾಪಕ ತಿಳಿವಳಿಕೆ ಈಗ

ಮರವಿಗೆ ಸಂದಿದೆ. ಅವರು ಮೊದಲು ಆರಂಭಿಸಿದ ಪತ್ರಿಕೆಯ ಹೆಸರು ಮೂಕನಾಯಕ 1920, ಬಹಿಷ್ಕೃತ ಭಾರತ, 1930 ರಲ್ಲಿ ಜನತಾ ಪತ್ರಿಕೆ ಆರಂಭ ಮಾಡಿದರು. ಮುಂದೆ ಪ್ರಬುದ್ಧ ಭಾರತ 1956 ಆರಂಭಿಸಿದರೂ ಅದೇ ವರ್ಷ ಅವರು ಲೋಕಾಂತರಾದ್ದರಿಂದ ಅದನ್ನು ನಡೆಸಲು ಆಗಲಿಲ್ಲ. ಇವುಗಲ ಸಮಗ್ರ ಅಧ್ಯಯನ ನಡೆದರೆ ಬಾಬಾ ಶ

ಬಾಬಾಸಾಹೇಬರು ಉತ್ತರಕ್ಕೆ ನಾಡುವಂತೆ ಮಾರುತ್ತರ ಕೊಡುವ ಕಲೆಯಲ್ಲಿ ನಿಪುಣರಾಗಿದ್ದರು. ದಲಿತರು ದೇವಾಲಯ ಪ್ರವೇಶ ಮಾಡುವ ವಿಷಯಕ್ಕೆ ಭೋಪಟ್ಕರರು "ಬಹಿಷ್ಕೃತರು ದೇವಾಲಯ ಪ್ರವೇಶ ಮಾಡಲು, ಕನಿಷ್ಟ ಪಕ್ಷ ಎರಡುನೂರು ವರ್ಷಗಳಾದರೂ ಹಿಡಿಯಬಹುದು" ಎಂದು ಒಮ್ಮೆ ವ್ಯಂಗ್ಯವಾಡಿದರು. ಅದಕ್ಕೆ ಅಂಬೇಡ್ಕರ್ ಉತ್ತರ ಸಿದ್ಧವಾಗಿತ್ತು "ಎರಡನೂರ ವರ್ಷಗಳಷ್ಟು ತಡವಾದರೂ ಸರಿ, ಅವರು ಒಪ್ಪಿಕೊಳ್ಳುತ್ತಿರುವುದು ಹೆಚ್ಚಲ್ಲವೇ" ಎಂದರು.

ಇದು ಬಾಬಾಸಾಹೇಬರಬೌದ್ಧ ಧರ್ಮಸ್ವೀಕರಿಸಲು ಮೊದಲು ನಡೆದದ್ದು. ಕ್ರೈಸ್ತಮತ ಸ್ವೀಕರಿಸಲು ಅಂಬೇಡ್ಕರಗೆ ಪಿ.ಎನ್. ಉಬಾಳೆ ಸಂದೇಶ ನೀಡಿದರು. ಅದಕ್ಕೆ ಅಂಬೇಡ್ಕರ ಕೊಟ್ಟ ಪ್ರತಿಕ್ರಿಯೆ ಸೊಗಸಾಗಿದೆ. ಅಸ್ಪೃಶ್ಯ ಚಳುವಳಿ ಮೂಲವಾಗಿ ಇರುವುದು ಸಾಮಾಜಿಕ ಹಕ್ಕುಗಳ ಪ್ರಾಪ್ತಿಗಾಗಿಯೇ ಹೊರತು ಪಾಪಮುಕ್ತಿ ಅಥವಾ ಈಶ್ವರ ಪ್ರಾಪ್ತಿಗಾಗಿ ಅಲ್ಲ. ಯಾಕೆಂದರೆ ಅಸ್ಪೃಶ್ಯ ಸಮಾಜವು ಪಾಪಿಯಾಗಿದೆ ಎಂಬ ತಿಳುವಳಿಕೆಯೇ ಮೂಲತಃ ತಪ್ಪಾಗಿದೆ. ಅಸ್ಪೃಶ್ಯತೆ ಅವರ ಪಾಪದ ಫಲವಾಗಿರದೆ, ವಿಜೇತರು ಮೇಲೆ ಹೊರೆಸಿದ ಸಾಮಾಜಿಕ ಬಹಿಷ್ಕಾರವಾಗಿದೆ."

ಅದಕ್ಕೆ ಬಾಬಾಸಾಹೇಬರು ಹಿಂದು ಧರ್ಮ ಬಿಟ್ಟು ಬೌದ್ಧ ಧರ್ಮವನು ಸ್ವೀಕಾರ ಮಾಡಿದರು. ಹಿಂದು ಧರ್ಮದಲ್ಲಿರುವ ಅನಿಷ್ಟ ಪದ್ಧತಿಗಳನ್ನು ಅರಿತು ಭಾರತ ದೇಶಕ್ಕೆ ಒಂದು ಒಳ್ಳೆಯ ಸಂದೇವನ್ನು ನೀಡಿದ್ದಾರೆ.

ಭಾರತ ದೇಶ ಬೌದ್ಧಮಯವಾಗುವ ಹೊತ್ತು ಕಾಣುತ್ತಾಯಿದೆ ಎಂದು ಹೇಳಬಹುದು. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಬಹಳಷ್ಟು ಶ್ರಮಪಟ್ಟು, ಕಷ್ಟಪಟ್ಟು ನೋವುಂಡುದ್ದರಿಂದ ಭಾರತ ದೇಶದಲ್ಲಿ ನಮಗೆ ಸುಂದರವಾದ ಜೀವನಕ್ಕೆ ದಾರಿ ಮಾಡಿ ಹೋಗಿದ್ದಾರೆ. ಇದರ ಫಲವೇ ಬೌದ್ಧ ಧರ್ಮಕ್ಕೆ ಕೊಡುಗೆ, ಬಹುಪ್ರಿಯವಾದವುಗಳು. ಯಾಕೆಂದರೆ ಬುದ್ಧ ಮತ್ತು ಅಂಬೇಡ್ಕರ ಎಂಬ ಎರಡು ಶಬ್ದಗಳು ಇಂದು ಇಡೀ ಜಗತ್ತಿಗೆ ಬೇರೆ ಬೇರೆ ದೇಶದವರು ಬುದ್ಧನನ್ನು ಮತ್ತು ಅಂಬೇಡ್ಕರ ಅವರಿಗೆ ಯಾಕೆ ಇಷ್ಟಪಡುತ್ತಾರೆ ಎಂದು ನಾವು ಅರ್ಥ ಮಾಡಿಕೊಳಬೇಕು.

ಬಂದುಗಳೇ ಹಲವಾರು ರೀತಿಯಿಂದ ಈ ದೇಶದಲ್ಲಿ ಬಾಬಾಸಾಹೇಬರು ಕೆಲಸಮಾಡಿ ಹೋಗಿದ್ದಾರೆ, ಅದನ್ನು ನಾವು ಕಾಪಾಡಬೇಕಾಗಿದೆ. ಅವರ ಕೊಟ್ಟ ಭಿಕ್ಷೆಯಿಂದ ನಾವು ಬದುಕುತ್ತಾ ಇದ್ದೇವೆ. ಅವರ ಋಣದ ಮಕ್ಕಳು ನಾವು ಭಾರತೀಯರೆಲ್ಲರು ನಾವುಗಳು. ಬುದ್ಧ, ಬಸವ, ಅಂಬೇಡ್ಕರ್, ಪೇರಿಯಾರ, ಜ್ಯೋತಿಬಾ ಫುಲೆ ದಂಪತಿಗಳ ವಿಚಾರಧಾರೆಯನ್ನು ಅರಿತು, ಅವರು ಹಾಕಿಕೊಟ್ಟ ದಾರಿಯಲ್ಲಿ ನಾವುಗಳು ನಡೆದು, ಈ ದೇಶವನ್ನು ಪ್ರಬುದ್ಧ ಭಾರತವನ್ನಾಗಿ ಮಾಡಿ, ನಾವು ಪ್ರಬುದ್ಧ ನಾಗರಿಕರಾಗುವತ್ತ ಸಾಗಬೇಕಾಗಿದೆ.

**ಆಕರ ಗ್ರಂಥಗಳು**


1. ಎಲ್ಲರಿಗೂ ಬೇಕಾದ ಅಂಬೇಡ್ಕರ : ಡಾ.ಜಿ.ಬಿ. ಹರೀಶ
2. ಕರ್ನಾಟಕದಲ್ಲಿ ಬೌದ್ಧ ಧಮ ೯ದ ಪುನರುಜ್ಜಿವನ : ಡಾ. ಬಿ.ಕೆ.ಎಸ್. ವರ್ಧನ್
3. ಡಾ. ಅಂಬೇಡ್ಕರ್ ವಾಚಿಕೆ : ಪ್ರೊ. ಎಚ್.ಟಿ. ಪೋತೆ
4. ಸಿದ್ಧಿಪುರುಷರ ಜೀವನ ಹಾಗೂ ಸಾಧನೆ : ಡಾ. ಆರ್.ಬಿ. ಚಿಲುಮಿ